

ಚಿತ್ರ. ಆಗ ಸೈಗಾನ್‌ನಲ್ಲಿ ನಾಲ್ಕು ವಿಮಾನ ನಿಲ್ದಾಣಗಳಿದ್ದವು. ತಾನ್ ಸೊನ್ ನ್ಹುತ್, ಥು ದೌ ಮೋಟ್, ಬೀನ್ ಹೋಅ ಮತ್ತು ಕ್ಯಾಪ್ಟನ್ ಸೇಂಟ್ ಜಾಕ್ವೆಸ್ ಎಂಬ ನಾಲ್ಕು ವಿಮಾನ ನಿಲ್ದಾಣಗಳು ಸೈಗಾನ್‌ನಲ್ಲಿ 50 ಮೈಲು ಸುತ್ತಳತೆಯೊಳಗೆ ಇದ್ದವು. ತಾನ್ ಸೊನ್ ನ್ಹುತ್ ವಿಮಾನ ನಿಲ್ದಾಣ, ಸೈಗಾನ್ ರೈಲ್ವೆ ನಿಲ್ದಾಣದಿಂದ 3.5 ಮೈಲು ಉತ್ತರ ದಿಕ್ಕಿನಲ್ಲಿದ್ದರೆ, ಥು ದೌ ಮೋಟ್ ವಿಮಾನ ನಿಲ್ದಾಣ, ಸೈಗಾನ್‌ನಿಂದ 18 ಮೈಲು ಉತ್ತರ ದಿಕ್ಕಿನಲ್ಲಿದೆ. ಬಹುಶಃ, ಸೈಗಾನ್ ನಗರಕ್ಕೆ ಹತ್ತಿರದ ತಾನ್ ಸೊನ್ ನ್ಹುತ್ ವಿಮಾನ ನಿಲ್ದಾಣದಲ್ಲಿ ಬೋಸರು ಬಂದಿಳಿದಿರಬಹುದು.

ಆ ದಿನ ಬೋಸ್ ಅವರೊಂದಿಗೆ ವಿಮಾನದಲ್ಲಿ ಯಾರು ಬಂದಿಳಿದರು ಎಂಬ ಮಾಹಿತಿ ಲಭ್ಯವಿಲ್ಲ. ಅವರು ತಮ್ಮೊಂದಿಗೆ ಏನು ತಂದರು ಎಂಬ ಬಗ್ಗೆಯೂ ಸ್ಪಷ್ಟ ವಿವರಗಳಿಲ್ಲ. ಸೈಗಾನ್‌ನಲ್ಲಿ ವಿಮಾನದಿಂದ ಬೋಸ್ ಇಳಿಯುವಾಗಿನ ಚಿತ್ರ ಕ್ಲಿಕ್ಕಿಸಿದವರು ಯಾರು? ಅವರನ್ನು ಭೇಟಿ ಮಾಡಲು ಅಲ್ಲಿಗೆ ಬಂದಿದ್ದವರು ಯಾರು? ಬಹುಶಃ, ಹಿಕಾರಿ ಕಿಕಾನ್‌ನ ಜಪಾನಿ ಅಧಿಕಾರಿಗಳು ಇದ್ದಿರಬಹುದು. ಹಾಗಾಗಿ ಬೋಸ್ ಮಿಲಿಟರಿ ಶೈಲಿಯಲ್ಲಿ ಸೆಲ್ಯೂಟ್ ಮಾಡುತ್ತಿದ್ದಾರೆ.

ಸೈಗಾನ್‌ನಲ್ಲಿ 76 ರೂ ಪೌಲ್ ಬ್ಲಾಂಚಿ ರಸ್ತೆಯಲ್ಲಿದ್ದ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಕೇಂದ್ರ ಕಚೇರಿಯಲ್ಲಿ ಸೇರಿ ಮುಂದಿನ ನಡೆಯ ಬಗ್ಗೆ ಜಪಾನಿ ಅಧಿಕಾರಿಗಳೊಂದಿಗೆ ಬೋಸ್ ಮತ್ತು ಸಹಚರರು ಚರ್ಚಿಸಿದ್ದಾರೆ. ಆನಂತರ ಎಲ್ಲಿ ಹೋದರು ಎಂಬುದೇ ನಿಗೂಢ!

ಟೋಕಿಯೋದಲ್ಲಿ ಅಷ್ಟರಲ್ಲಾಗಲೇ 'ಮಿತ್ರ ಪಡೆ' ಇದ್ದುದರಿಂದ ಬೋಸ್ ಅವರಿಗದು ಸುರಕ್ಷಿತ ಸ್ಥಳವೇನೂ ಆಗಿರಲಿಲ್ಲ. ಸೈಗಾನ್‌ನಿಂದ ಬೋಸ್ ಹೊರಗೆ ಹೋದ ಕುರಿತು ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳುವರಾದರೂ, ಯಾವುದೇ ಖಚಿತವಾದ ದಾಖಲೆಗಳು ಲಭ್ಯವಿಲ್ಲ. ಜಪಾನಿ ಮಿಲಿಟರಿ ದಾಖಲೆಯಲ್ಲಾಗಲೀ, ಸೈಗಾನ್‌ನ ವಿಮಾನ ನಿಲ್ದಾಣದ ದಾಖಲೆಯಲ್ಲಾಗಲೀ ಬೋಸ್ ಅವರನ್ನು ಹೊತ್ತ ವಿಮಾನ ಆಗಸ್ಟ್ 17ರಂದು ಸೈಗಾನ್‌ನಿಂದ ಹಾರಿದ ಬಗ್ಗೆ ಮಾಹಿತಿಯಿಲ್ಲ.

ಆಗಸ್ಟ್ 23ರಂದು ಜಪಾನಿ ಡೊಮೈ ನ್ಯೂಸ್ ಏಜನ್ಸಿಯು, ತೈಪೈನಲ್ಲಿ ನಡೆದ ವಿಮಾನ ಅಪಘಾತದಲ್ಲಿ ಬೋಸ್ ನಿಧನರಾದರೆಂದು ಪ್ರಕಟಿಸಿತು. ಇತ್ತ ಸೈಗಾನ್‌ನಲ್ಲಿ 1945ರ ಆಗಸ್ಟ್ 25ರ ಹೊತ್ತಿಗೆ ವಿಯೆಟ್ ಮಿನ್ ಆಡಳಿತವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತು. ಜಪಾನೀಯರು ಫ್ರೆಂಚರನ್ನು ಪಕ್ಕಕ್ಕೆ ತಳ್ಳಿದ್ದರೆ, ಮೂಲನಿವಾಸಿಗಳಾದ ವಿಯೆಟ್ ಮಿನ್ ಸೈನ್ಯ ತಮ್ಮ ದೇಶದಲ್ಲಿನ ಜಪಾನೀಯರನ್ನು ಹೊರದಬ್ಬಲು ಪ್ರಯತ್ನಿಸಿತ್ತು. ಸೆಪ್ಟೆಂಬರ್ 10ರ ತನಕ ಒಂದು ರೀತಿಯ ಅಲ್ಲೋಲ ಕಲ್ಲೋಲದ ವಾತಾವರಣವಿತ್ತು. ಈ ಪರಿಸ್ಥಿತಿಯಲ್ಲಿ ಸುಭಾಷ್ ಚಂದ್ರ ಬೋಸ್ ಸಂಗತಿ ಮರೆಯಾಗಿಬಿಟ್ಟಿತ್ತು.

ಫ್ರೆಂಚ್ ವಸಾಹತುವಾಗಿದ್ದ ಇಂಡೊ–ಚೈನಾವನ್ನು ಪುನಃ ವಸಾಹತುವನ್ನಾಗಿಸಲು ಫ್ರೆಂಚ್ ಮತ್ತು ಮಿತ್ರ ಸೈನ್ಯದ ನಡುವೆ ಮಾತುಕತೆ ನಡೆದವು. ಅದರಂತೆ, 1945ರ ಸೆಪ್ಟೆಂಬರ್ 12ರಂದು ಚೀನೀ ಸೈನ್ಯ ಉತ್ತರ ವಿಯೆಟ್ನಾಮ್ ಅನ್ನು ಪ್ರವೇಶಿಸಿತು. 30,000 ಜಪಾನಿ ಸೈನಿಕರು ಶರಣಾದರು. ಅದೇ ಸಮಯದಲ್ಲಿ ದಕ್ಷಿಣ ವಿಯೆಟ್ನಾಮ್‌ನಲ್ಲಿ 40,000 ಜಪಾನಿ ಸೈನಿಕರು ಶರಣಾದರು. ಆ ವೇಳೆಗೆ ಬ್ಯಾಂಕಾಕ್ ಕೂಡ ಬ್ರಿಟಿಷರ ವಶವಾಗಿತ್ತು. ಸೆಪ್ಟೆಂಬರ್ 12ರಂದು ಫ್ರೆಂಚ್ ಧ್ವಜವನ್ನು ಗವರ್ನರ್ ಪ್ಯಾಲೆಸ್ ಮೇಲೆ ಹಾರಿಸಲಾಯಿತು.

ಮಿತ್ರ ಸೈನ್ಯ ಸೈಗಾನ್ ಪ್ರವೇಶಿಸುತ್ತಿದ್ದಂತೆಯೇ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಮತ್ತು ರೇಡಿಯೊ ಕೇಂದ್ರದ ಸಿಬ್ಬಂದಿಯನ್ನು ಬಂಧಿಸಿದರು. ಅಷ್ಟರಲ್ಲಿ ಅಲ್ಲಿದ್ದ ದಾಖಲೆಗಳನ್ನೆಲ್ಲಾ ನಾಶಪಡಿಸಲಾಗಿತ್ತು.

ಸೆಪ್ಟೆಂಬರ್ 1945ರಲ್ಲಿ ಲಿಯಾನ್ ಪ್ರೌಚಂಡಿ ಅವರನ್ನು ಫ್ರೆಂಚ್ ಸೈನಿಕರು ಬಂಧಿಸಿ ಕರೆದೊಯ್ದು ಚಿತ್ರಹಿಂಸೆ ನೀಡಿದರು. ಸುಮಾರು ಮೂರು ತಿಂಗಳ ನಂತರ ಬಿಡುಗಡೆ ಮಾಡಿದಾಗ ಪ್ರೌಚಂಡಿಗೆ ಹಿಂದಿನದೆಲ್ಲ ಮರೆತುಹೋಗಿತ್ತು, ಮತಿಭ್ರಮಣೆಯಾಗಿತ್ತು. ಬೋಸ್ ಅವರ ಕುರಿತಾದ ಮಾಹಿತಿಗಾಗಿಯೋ ಅಥವಾ ಐ.ಎನ್.ಎ. ಸಂಗ್ರಹಿಸಿದ್ದ ಸಂಪತ್ತಿಗಾಗಿಯೋ, ಏತಕ್ಕಾಗಿ ಅವರನ್ನು ಹಿಂಸಿಸಿದರು ಎಂಬುದು ತಿಳಿದಿಲ್ಲ. ಈ ಘಟನೆಯ ನಂತರ ಪ್ರೌಚಂಡಿ ಕುಟುಂಬ ಪಾಂಡಿಚೇರಿಗೆ ಬಂದು ನೆಲೆಸಿತು.

1945ರ ಆಗಸ್ಟ್ 18 – ಬೋಸ್ ಕಣ್ಮರೆಯಾದ ದಿನ. ಒಂದೆಡೆ ವಿಮಾನ ಅಪಘಾತಕ್ಕೆ ಪುರಾವೆಗಳಿಲ್ಲ, ಮತ್ತೊಂದೆಡೆ ರಷ್ಯಾಗೆ ಹೋಗಿದ್ದರ ಬಗ್ಗೆ ದಾಖಲೆಗಳಿಲ್ಲ. ಹಾಗಿದ್ದಲ್ಲಿ, ಆ ದಿನ ಬೋಸ್ ಸೈಗಾನ್ ಬಿಟ್ಟು ಹೊರ ಹೋಗಲಿಲ್ಲವೇ? ಇದಕ್ಕೆ ಪುಷ್ಟಿ ಕೊಡುವಂತೆ, ಆ ದಿನಗಳಲ್ಲಿ ಸೈಗಾನ್‌ನಲ್ಲಿದ್ದ ಅಮೆರಿಕದ ಯುದ್ಧ ವರದಿಗಾರ ಆಲ್ಫ್ರೆಡ್ ವ್ಯಾಗ್, ತಾನು ಬೋಸ್ ಅವರನ್ನು ಆಗಸ್ಟ್ 18ರ ನಂತರದ ದಿನಗಳಲ್ಲಿ ಸೈಗಾನ್‌ನಲ್ಲಿ ನೋಡಿದ್ದಾಗಿ ಹೇಳಿದ್ದ. ಫ್ರೆಂಚರ ಒಂದು ದಾಖಲೆಪತ್ರದಲ್ಲಿ (1947ರ ಡಿಸೆಂಬರ್ 11) ಬೋಸ್ ಅವರ ಹೆಸರಿದ್ದು, ಅವರು ಇಂಡೋಚೀನಾದಿಂದ ತಪ್ಪಿಸಿಕೊಂಡವರೆಂದು ಬರೆಯಲಾಗಿದೆ. ಅಂದರೆ, 1945ರ ಆಗಸ್ಟ್ 18ರ ಸುಮಾರಿನಲ್ಲಿ ಬೋಸ್ ಅವರನ್ನು ಮಿತ್ರ ಸೈನ್ಯ ಅಥವಾ ಫ್ರೆಂಚ್ ಸೈನ್ಯ ಬಂಧಿಸಿದ್ದು, ಅವರು ಬಂಧನದಿಂದ ತಪ್ಪಿಸಿಕೊಂಡಿದ್ದಿರಬಹುದು.

### ಐತಿಹಾಸಿಕ ಕಟ್ಟಡ

'76 ರೂ ಪೌಲ್ ಬ್ಲಾಂಚಿ ರಸ್ತೆ'ಯಲ್ಲಿದ್ದ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಕೇಂದ್ರ ಕಚೇರಿ, ಅಂದರೆ ಪ್ರೌಚಂಡಿ ಕುಟುಂಬದ ಬಂಗಲೆಯನ್ನು 1975ರಲ್ಲಿ ವಿಯೆಟ್ನಾಮೀ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಈ ಕಟ್ಟಡದ ಐತಿಹಾಸಿಕ ಮಹತ್ವವನ್ನು ಸಾರುವ ಫಲಕ ಹಾಕಿ, ಶಿಥಿಲವಾಗಿರುವ ಕಟ್ಟಡವನ್ನು ಸಂರಕ್ಷಿಸಬೇಕು ಎಂದು ಪ್ರೌಚಂಡಿಯ ಮೊಮ್ಮಗ ಪ್ರೊ. ಜೆ.ಬಿ.ಪಿ. ಮೋರ್, ವಿಯೆಟ್ನಾಮ್ ಸರ್ಕಾರಕ್ಕೂ ಮತ್ತು ಭಾರತ ಸರ್ಕಾರಕ್ಕೂ ಮನವಿಯನ್ನು ಕೊಟ್ಟಿದ್ದಾರೆ.

ನೇತಾಜಿ ಕಣ್ಮರೆಯಾದ ನಂತರ ದೇಶದಲ್ಲಿ ನಡೆದ ಹಲವಾರು ಘಟನೆಗಳು ಅವರು ನಂಬಿದ್ದ ಆದರ್ಶಕ್ಕೆ ವಿರೋಧವಾಗಿದ್ದವು. ಅವರು ಎಲ್ಲಿದ್ದರೂ ಇವನ್ನು ಖಂಡಿಸದೇ ಇರುತ್ತಿರಲಿಲ್ಲ, ಹಾಗಾಗಿ ಅವರು ಬಹುಶಃ ಈ ಭೂಮಿಯಿಂದಲೇ ಕಣ್ಮರೆಯಾಗಿರಬೇಕು ಎಂಬ ವಾದವೂ ಇದೆ.

'ಕಾಲ–ದೇಶದ ಆಚೆಗಿನ ಯಾವುದೋ ವಿಸ್ಮೃತಿಯ ತುಣುಕು ನಮ್ಮೆದುರು ಮಿಂಚಿ ಮತ್ತೆ ಅದೇ ವಿಸ್ಮೃತಿಯಲ್ಲಿ ಲೀನವಾಗಿ ಹೋಗಿತ್ತು' ಎಂಬ ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯ ಸಾಲುಗಳಂತೆ, ನೇತಾಜಿ ಕೂಡ ಸೈಗಾನ್‌ನಲ್ಲಿ ಮಿಂಚಿನಂತೆ ಮಾಯವಾದದ್ದಂತೂ ಸತ್ಯ.

ಪ್ರತಿಕ್ರಿಯಿಸಿ: feedback@sudha.co.in